ಬಾಡಿಗೆದಾರರು ಇರುತ್ತಾರೋ ಅವರು ಬಾಡಿಗೆ ಕಟ್ಟುತ್ತಾ ಇರುತ್ತಾರೆ. ಅದಕ್ಕೆ ಏನು ಮಾಡಬೇಕು ಎಂದರೆ ನೀವು ಒಂದು ಕಂಪ್ಲೆಂಟ್ ಕಳುಹಿಸಬೇಕು.

ಶ್ರೀ ಮಿರಾಜುದ್ದೀನ್ ಎನ್. ಪಾಟೀಲ್: ಯಾರಿಗೆ?

ಅಧ್ಯಕ್ಷರು: ನೀವು ಸರ್ಕಾರದ ಗಮನಕ್ಕೆ ಕಂಪ್ಲೆಂಟ್ ತರಬೇಕು, ಇಂತಹ ಅಂಗಡಿಯಲ್ಲಿ ಇಂತಹವರು ಬಾಡಿಗೆಗೆ ತೆಗೆದುಕೊಂಡಿದ್ದಾರೆ, ಅವರು ನಡೆಸುತ್ತಾ ಇಲ್ಲ, ಅವರು ಬೇರೊಬ್ಬರಿಗೆ ಬಾಡಿಗೆಯನ್ನು ಕೊಟ್ಟಿದ್ದಾರೆ, ಇದರಿಂದ ಸರ್ಕಾರಕ್ಕೆ ವಂಚನೆ ಆಗುತ್ತಾ ಇದೆ, ಮತ್ತು ಮುನಿಸಿಪಾಲಿಟಿಗೆ ಬರುವ ಆದಾಯ ಕಡಿಮೆಯಾಗುತ್ತಿದೆ. ಆದ್ದರಿಂದ ಇದನ್ನು ತೆರವು ಮಾಡಿಸಿ ಪುನಃ ಆ್ಯಕ್ಷನ್ ಮಾಡಿಸಿದರೆ ಹೆಚ್ಚು ಆದಾಯ ಬರುತ್ತದೆಂದು ನೀವು ಅರ್ಜಿ ಕೊಡಬೇಕು. ಇಲ್ಲದಿದ್ದರೆ ಅವರ ಗಮನಕ್ಕೆ ಹೇಗೆ ಬರುತ್ತದೆ. ಆದ್ದರಿಂದ ನೀವು ಲಿಖಿತ ಮೂಲಕವಾಗಿ ಅವರ ಗಮನಕ್ಕೆ ತೆಗೆದುಕೊಂಡು ಬನ್ನಿ.

ಸಣ್ಣ ಕೈಗಾರಿಕೆಗಳಿಗೆ ಮೂಲ ಭೂತ ಸೌಲಭ್ಯಗಳು

104 (667) ಶ್ರೀ ಬಿ.ಶಿವರಾಮು:

(ಶ್ರೀ ಡಿ.ಆರ್. ಪಾಟೀಲ್ ಅವರ ಪರವಾಗಿ) ಮಾನ್ಯ ಅಧ್ಯಕ್ಷರೆ, ಈಗ ಗ್ರೋತ್ ಸೆಂಟರ್‌ಗೆ ಧಾರವಾಡ ರಾಯಚೂರು, ಹಾಸನಕ್ಕೆ 7720 ಲಕ್ಷ ಕೇಂದ್ರದಿಂದ ಬಂದಿದೆಯೆಂದು ಹೇಳಿದ್ದಾರೆ, ರಾಜ್ಯ ಸರ್ಕಾರದಿಂದ ಇನ್ನೂ 750 ರೂ. ಬಿಡುಗಡೆಯಾಗಬೇಕೆಂದು ಹೇಳಿರುತ್ತಾರೆ. ಯಾವಾಗ ಅದು ಬಿಡುಗಡೆಯಾಗುತ್ತದೆ? ಎಷ್ಟು ಖರ್ಚು ಮಾಡಿದ್ದೀರಿ? ಯಾವ್ಯಾವುದಕ್ಕೆ ಎಷ್ಟು ಖರ್ಚು ಮಾಡಿದ್ದೀರಿ? ಎರಡನೆಯದಾಗಿ, ಕೆಲವು ಮಿನಿ ಗ್ರೋಲೌ ಸೆಂಟರ್‌ಗಳನ್ನು ಪ್ರಾರಂಭ ಮಾಡುತ್ತೀದ್ದೇವೆಂದು ಹೇಳಿದ್ದೀರಿ. ಅದು ಯಾವ ಹಂತದಲ್ಲಿದೆ? ಮೂರನೆಯದಾಗಿ, ಸಹಕಾರಿ ಕ್ಷೇತ್ರದಲ್ಲಿ ಕೈಗಾರಿಕಾ ವಸಾಹತುಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುತ್ತಿದ್ದೇವೆಂದು ಹೇಳಿದ್ದೀರಿ, ಏನನ್ನು ಒದಗಿಸಿದ್ದೀರಿ? ಎಷ್ಟು ಹಣ ಬಂದಿದೆ?

ಶ್ರೀ ಬಿ.ಎ. ಮೊಯಿದ್ದೀನ್ (ಸಣ್ಣ ಕೈಗಾರಿಕೆಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಹಾಸನ, ರಾಯಚೂರು ಮತ್ತು ಧಾರವಾಡ ಈ ಮೂರು ಪ್ರದೇಶಗಳಲ್ಲಿ ಕೈಗಾರಿಕೆಯ ಅಭಿವೃದ್ಧಿಯಲ್ಲಿ ಬಹಳ ಹಿಂದುಳಿದಿರುವಂಥ ಪ್ರದೇಶವೆಂದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಮನಗಂಡು, ಈ ಮೂರು ಕೇಂದ್ರಗಳಲ್ಲಿ ಗ್ರೋಲೌ ಸೆಂಟರ್‌ಗಳನ್ನು ಮಾಡಿದೆ. ಹಾಸನದ ಬಗ್ಗೆ ಮಾನ್ಯ ಶಿವರಾಮ್‌ರವರಿಗೆ ಚೆನ್ನಾಗಿ ಗೊತ್ತಿದೆ. ಅಲ್ಲಿ ಬಹಳ ವೇಗವಾಗಿ ಅದು ಅಭಿವೃದ್ಧಿಯಾಗುತ್ತಿದೆ, ಈಗಾಗಲೇ ಹೇಮಾವತಿ ನದಿಯಿಂದ ಅಲ್ಲಿಗೆ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಸುಮಾರು ಇಪ್ಪತ್ತೆಂಟು ಕೋಟಿ ರೂಪಾಯಿಗಳ ವೆಚ್ಚದ ಯೋಜನೆ ಅದು. ಅದರ ಜೊತೆಗೆ ಅಲ್ಲಿ ಎರಡನೇ ಹಂತದ ಗ್ರೋಲೌ ಸೆಂಟರ್‌ನ್ನು ಎರಡನೆಯ ತಾರೀಖು ಮಾನ್ಯ ಪ್ರಧಾನ ಮಂತ್ರಿಯವರು ಉದ್ಘಾಟನೆ ಮಾಡುವವರಿದ್ದಾರೆ. ಇದಲ್ಲದೆ ಧಾರವಾಡ ಗ್ರೋಲೌ ಸೆಂಟರ್‌ಗೆ ಇಲ್ಲಿ ನಮೂದಿಸಿರುವುದಕ್ಕಿಂತ ಜಾಸ್ತಿ ಹಣವನ್ನು ಈಗಾಗಲೇ ಖರ್ಚು ಮಾಡಿದ್ದೇವೆ. ಹುಬ್ಬಳ್ಳಿ ಮತ್ತು ಧಾರವಾಡ ಮಧ್ಯದಲ್ಲಿನ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿ

ಎರಡು ಸಾವಿರ ಎಕರೆಗಳಷ್ಟು ಗ್ರೋಥ್ ಸೆಂಟರ್‌ನ್ನು ಮಾಡಿದ್ದೇವೆ. ಅಲ್ಲೂ ಸಾಕಷ್ಟು ಪ್ರಗತಿಯಾಗಿದೆ. ಆದರೆ ರಾಯಚೂರಿನಲ್ಲಿ ನಾವೇನು ಗ್ರೋಥ್ ಸೆಂಟರ್‌ನ್ನು ಮಾಡಲು ಏಜನ್ಸಿಯನ್ನು ನಿಗದಿ ಮಾಡಿದ್ದೆವೋ ಅವರಿಗೆ ಬೇಕಾದಂಥ ಮೂಲಭೂತ ಸೌಲಭ್ಯಗಳು ಇಲ್ಲದ ಕಾರಣದಿಂದಲೋ ಏನೋ ಅಲ್ಲಿ ಹೆಚ್ಚು ಪ್ರಗತಿಯನ್ನು ಮಾಡಲು ಆಗಲಿಲ್ಲ. ಆದರೆ ಅಲ್ಲೂ ಹೈದ್ರಾಬಾದ್ ಮೂಲದಿಂದ ಬಂದಿರತಕ್ಕಂಥ ಉದ್ಯಮಿಗಳು ಆಸಕ್ತಿಯನ್ನು ತೋರಿಸಿದ್ದಾರೆ. ಅದೂ ಒಳ್ಳೆಯ ಗ್ರೋಥ್ ಸೆಂಟರ್ ಆಗತಕ್ಕಂಥ ಸೂಚನೆಗಳಿವೆ. ಪತ್ರಿಕೆಯಲ್ಲಿ ಬಂದಿರುವಂತೆ ರಾಯಚೂರಿಗೆ ಖರ್ಚು ಮಾಡಬೇಕಾಗಿರುವ ಹಣವನ್ನು ಬೇರೆ ಕಡೆಗೆ ಉಪಯೋಗಿಸಿದ್ದೇವೆ ಎನ್ನತಕ್ಕದ್ದು ಮಾತ್ರ ಸರಿಯಲ್ಲ.

ಶ್ರೀ ಬಿ. ಶಿವರಾಮ್: ಮಾನ್ಯ ಅಧ್ಯಕ್ಷರೆ, ನಾನು ಕೇಳಿದ ಒಂದು ಪ್ರಶ್ನೆಗೂ ಅವರು ಉತ್ತರವನ್ನು ಹೇಳಲಿಲ್ಲ. ತಾವು ಬಹುಶಃ ಅದನ್ನು ಗಮನಿಸಿದ್ದೀರೆಂದು ತಿಳಿದುಕೊಂಡಿದ್ದೆ. ಹಾಸನ, ಧಾರವಾಡ ಮತ್ತು ರಾಯಚೂರು ಗ್ರೋಥ್ ಸೆಂಟರ್‌ಗೆ ಕೇಂದ್ರ ಸರ್ಕಾರದವರು 720 ಲಕ್ಷ ರೂ. ಹಣವನ್ನು ಕೊಟ್ಟಿದ್ದಾರೆಂದು ಹೇಳಿದ್ದೀರಿ. ಆದರೆ ರಾಜ್ಯ ಸರ್ಕಾರದವರು ಹಣವನ್ನು ಬಿಡುಗಡೆ ಮಾಡಿಲ್ಲವಲ್ಲಾ, ಯಾವಾಗ ಬಿಡುಗಡೆ ಯಾಗುತ್ತದೆ? ಎಷ್ಟು ಖರ್ಚು ಮಾಡಿದ್ದೀರಿ? ಅದಕ್ಕೆ ನಿಗದಿತವಾದ ಉತ್ತರ ಬರಲಿಲ್ಲ.

ಶ್ರೀ ಬಿ.ಎ. ಮೊಯಿದ್ದೀನ್: ಮಾನ್ಯ ಅಧ್ಯಕ್ಷರೆ, ಅದರ ವಿವರಣೆ ಸಧ್ಯಕ್ಕೆ ನನ್ನ ಹತ್ತಿರ ಇಲ್ಲ. ಅದನ್ನು ತರಿಸಿಕೊಂಡು ಒದಗಿಸುತ್ತೇನೆ. ಮಾನ್ಯ ಡಿ.ಆರ್. ಪಾಟೀಲರ ಉದ್ದೇಶವೇನಿತ್ತು ಎಂಬ ಬಗ್ಗೆ ಉತ್ತರವನ್ನು ಕೊಡುತ್ತೇನೆ. ಸರ್ಕಾರದ ಹೊಸ ನೀತಿಯ ಪ್ರಕಾರ ಖಾಸಗಿ ಮತ್ತು ಸಹಕಾರಿ ವಲಯಗಳಲ್ಲಿ ಯಾರಾದರೂ ಇಂಥ ಮೂಲಭೂತ ಸೌಲಭ್ಯವನ್ನು ಉದ್ದಿಮೆಗಳಿಗೆ ಕಲ್ಪಿಸಿಕೊಡುವುದಾದರೆ ಅಂಥವರಿಗೆ 20 ಪರ್‌ಸೆಂಟ್ ಸಬ್ಸಿಡಿಯನ್ನು ಕೊಡುತ್ತೇವೆ. ಆ ರೀತಿ ಸಬ್ಸಿಡಿಯು 20 ಲಕ್ಷ ರೂ. ಮೀರಬಾರದು ಮತ್ತು ಆ ಯೋಜನೆಯ ವೆಚ್ಚವು 5 ಕೋಟಿಗಿಂತ ಮೀರಿರಬಾರದು.

ಶ್ರೀ ಬಿ. ಶಿವರಾಮ್: ಮಾನ್ಯ ಅಧ್ಯಕ್ಷರೆ, ಉತ್ತರ ಸಮರ್ಪಕವಾಗಿ ಬರಲಿಲ್ಲ. ಹಣವು ಬಿಡುಗಡೆಯಾಗಿದೆಯೇ ಎಂದು ಕೇಳಿದ್ದೇನೆ.

ಅಧ್ಯಕ್ಷರು: ತಕ್ಷಣಕ್ಕೆ ಅದರ ಬಗ್ಗೆ ಮಾಹಿತಿ ಇಲ್ಲವಂದಿದ್ದಾರಲ್ಲಾ.

ಶ್ರೀ ಬಿ. ಶಿವರಾಮ್: ಅಧ್ಯಕ್ಷರೆ, ಮಾನ್ಯ ಡಿ.ಆರ್. ಪಾಟೀಲರು ಯಾವ ಉದ್ದೇಶದಿಂದ ಪ್ರಶ್ನೆಯನ್ನು ಕೇಳಿದ್ದಾರೆ ಎಂಬ ಬಗ್ಗೆ ಅವರು ಹೇಳಿದ್ದಾರೆ. ಆದರೆ ಡಿ.ಆರ್. ಪಾಟೀಲರ ಉದ್ದೇಶವೇನಿತ್ತು ಎಂದರೆ, ಗದಗಿನಲ್ಲಿ ಸಹಕಾರಿ ಕ್ಷೇತ್ರದಲ್ಲಿ ಇಂಥ ಮೂಲಭೂತ ಸೌಲಭ್ಯವನ್ನು ಒದಗಿಸಲು ಏನು ಕೆಲಸ ಮಾಡುತ್ತಿದ್ದಾರೆ ಅದಕ್ಕೆ ಹಣವನ್ನು ಒದಗಿಸಿದ್ದೀರಾ ಎಂಬುದು.

ಅಧ್ಯಕ್ಷರು: ನಾವು ಅಲ್ಲಿಗೆ ಹೋಗಿಬಂದಿದ್ದೇನೆ. ಹೊಸ ಕೈಗಾರಿಕಾ ನೀತಿಯಪ್ರಕಾರ ಅವರೆಲ್ಲರಿಗೂ ಹಣವನ್ನು ಕೊಟ್ಟಿದ್ದೀರೋ ಇಲ್ಲವೋ ಎಂಬುದು ಡಿ.ಆರ್. ಪಾಟೀಲರ ಉದ್ದೇಶವಾಗಿತ್ತು. ಆದುದರಿಂದ ಮಂತ್ರಿಯವರು 20 ಲಕ್ಷ ರೂ. ವರೆಗೆ ಸಬ್ಸಿಡಿ ಕೊಡುತ್ತೇವೆ, ಮತ್ತು ಪ್ರಾಜೆಕ್ಟ್ ಕಾಸ್ಟ್ ಐದು ಕೋಟಿ ರೂ. ಗಿಂತ ಮೀರಿರಬಾರದು ಎನ್ನತಕ್ಕ ಮಾತನ್ನು

ಹೇಳಿದ್ದಾರೆ. ಇಂಥ ನಿರ್ಣಯವನ್ನು ಸರ್ಕಾರ ತೆಗೆದುಕೊಂಡಿದೆ ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ.

ಶ್ರೀ ಬಿ. ಶಿವರಾಮ್: ಅಧ್ಯಕ್ಷರೆ, ಮಂತ್ರಿಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ಯಾವುದೇ ಹಣವನ್ನು ಡೈವರ್ಟ್ ಮಾಡಿಲ್ಲವೆಂದು ಹೇಳಿದ್ದಾರೆ. ಇದು ಏಕೆ ಬಂತೋ ನನಗಂತೂ ಗೊತ್ತಿಲ್ಲ. ತಾವೇನು ರಾಯಚೂರಿನ ಗ್ರೋಥ್ ಸೆಂಟರ್‌ನ ಕೆಲಸವನ್ನು ಕೆ.ಎಸ್.ಐ.ಐ.ಡಿ.ಸಿ.ಗೆ ವಹಿಸಿಕೊಟ್ಟಿದ್ದೀರಿ, ಆ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಆದರೆ ಬಿಡುಗಡೆಯಾಗಿರುವ ಇಷ್ಟು ಹಣ ಎಲ್ಲಿಗೆ ಹೋಗುತ್ತಿದೆ, ಉಳಿದ ಎರಡು ಗ್ರೋಥ್ ಸೆಂಟರ್‌ಗಳಿಗೆ ಹೋಗುತ್ತಿದೆಯೇ? ಧಾರವಾಡಕ್ಕಿಂತ ಹಾಸನಕ್ಕೆ ಹೆಚ್ಚು ಹೆಚ್ಚು ಹಣ ಖರ್ಚು ಆಗುತ್ತಿದೆ ಎನ್ನತಕ್ಕ ಮಾತನ್ನು ಪದೇಪದೇ ಹೇಳುತ್ತಿರುವ ಹಿನ್ನೆಲೆಯಲ್ಲಿ ನಾನು ಇದನ್ನು ಹೇಳುತ್ತಿದ್ದೇನೆ. ಆದ್ದರಿಂದ ಅದು ನಿಜವೋ ಅಥವಾ ಇಲ್ಲವೋ ಎಂಬ ಬಗ್ಗೆ ಸ್ಪಷ್ಟೀಕರಣ ನೀಡಬೇಕು.

ಶ್ರೀ ಬಿ.ಎ. ಮೊಯಿದ್ದೀನ್: ಅಧ್ಯಕ್ಷರೆ, ಇರತಕ್ಕ ವಿಚಾರದ ಬಗ್ಗೆ ಸ್ಪಷ್ಟೀಕರಿಸಿದ್ದೇನಷ್ಟೆ.

ಕರ್ನಾಟಕ ಸಣ್ಣ ಕೈಗಾರಿಕಾ ಮಾರುಕಟ್ಟೆ ನಿಗಮದಲ್ಲಿ ನೋಂದಾಯಿಸಲ್ಪಟ್ಟ ಕೈಗಾರಿಕಾ ಘಟಕಗಳು

105(486) ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಚಿಕ್ಕಮಗಳೂರು): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕರ್ನಾಟಕ ಸಣ್ಣ ಕೈಗಾರಿಕಾ ಮಾರುಕಟ್ಟೆ ನಿಗಮದಲ್ಲಿ ಇದುವರೆಗೆ ಎಷ್ಟು ಕೈಗಾರಿಕಾ ಘಟಕಗಳು ನೋಂದಾಯಿಸಲ್ಪಟ್ಟಿವೆ. (ಜಿಲ್ಲಾವಾರು ಮಾಹಿತಿ ನೀಡುವುದು).

ಆ) ರಾಜ್ಯದಲ್ಲಿ ಇಲ್ಲಿಯವರೆಗೆ ಜಿಲ್ಲಾ ಪಂಚಾಯತಿಗಳಿಗೆ ಕರ್ನಾಟಕ ಸಣ್ಣ ಕೈಗಾರಿಕಾ ಮಾರುಕಟ್ಟೆ ನಿಗಮದಿಂದ ಬೇಕಾದಂತಹ ಸಾಮಗ್ರಿಗಳನ್ನು ಸರಬರಾಜು ಮಾಡಿರುವ ಮೊತ್ತವೆಷ್ಟು?

ಇ) ಜಿಲ್ಲಾ ಪಂಚಾಯತಿಗಳಿಗೆ ಈ ನಿಗಮದಿಂದ ಕಳಪೆ ಸಾಮಗ್ರಿಗಳನ್ನು ಸರಬರಾಜು ಮಾಡಿರುವುದನ್ನು ಸರ್ಕಾರದವರ ಗಮನಕ್ಕೆ ಬಂದಿದೆಯೋ?

ಈ) ಇಂತಹ ಪ್ರಕರಣಗಳು ಎಷ್ಟಿವೆ? ಹಾಗೂ ಇದರ ಬಗ್ಗೆ ಹಮ್ಮಿಕೊಂಡಿರುವ ಸರ್ಕಾರದ ಕ್ರಮ ಎನು?

ಬಿ.ಎ. ಮೋಯಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು)

ಅ) 3888. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.)

ಆ) ಈಗಿನ ಜಿಲ್ಲಾ ಪಂಚಾಯತಿಗಳು ಅಸ್ತಿತ್ವಕ್ಕೆ ಬಂದಲ್ಲಿಂದ, ಎಂದರೆ 1995-96ನೇ ಸಾಲಿನಲ್ಲಿ ರೂ. 70 ಕೋಟಿ ಮತ್ತು 96-97ನೇ ಸಾಲಿನಲ್ಲಿ 1997ರ ಜನವರಿ ತಿಂಗಳ ಅಂತ್ಯದವರೆಗೆ ಸುಮಾರು 58.5 ಕೋಟಿಗಳಷ್ಟು ಸಾಮಗ್ರಿಗಳನ್ನು ಸರಬರಾಜು ಮಾಡಲಾಗಿದೆ.

ಇ) ಹೌದು (ಒಂದು ಪ್ರಕರಣದಲ್ಲಿ ಮಾತ್ರ)